ಯಾರನ್ನೋ ಬಯ್ಯುತ್ತೇವೆ; ಇನ್ನಾರನ್ನೋ ಹೊಡೆಯುತ್ತೇವೆ. ಯಾರಿಗೋ ಶಾಪ ಹಾಕುತ್ತೇವೆ; ಇನ್ನಾರಿಗೋ ಚಪ್ಪಾಳೆ ತಟ್ಟುತ್ತೇವೆ. ಆ ಸಮಯದಲ್ಲಿ ಏನನ್ನೋ ಬಯಸುತ್ತೇವೆ; ಇನ್ನೇನನ್ನೋ ತಿರಸ್ಕರಿಸುತ್ತೇವೆ. ಹೀಗೆ ಮಾಡುವಾಗಲೆಲ್ಲ ನಮ್ಮ ಬುದ್ಧಿ ನಮ್ಮ ಕೈಯಲ್ಲಿರದು, ಅಷ್ಟೆ! ನಾವು ಬಯಸುವುದೆಲ್ಲವೂ ಆ ಕ್ಷಣವೇ ಸಿಕ್ಕುತ್ತದೆ ಎಂದಿಟ್ಟುಕೊಳ್ಳಿ; ಅವು ನಮಗೆ ಹಿತಕಾರಿಯಾಗಿರುತ್ತವೆ – ಎನ್ನುವುದಕ್ಕೆ ಏನಾದರೂ ಪುರಾವೆ ಇದೆಯೆ? ನಾವು ಬೇಡ ಎಂದು ಹೇಳಿದ್ದು ನಮ್ಮಿಂದ ದೂರವಾಯಿತು – ಎಂದಿಟ್ಟುಕೊಳ್ಳಿ; ಬೇಡವಾದುದಷ್ಟೆ ದೂರವಾಯಿತು ಎಂದು ಸಂತೋಷವನ್ನು ಪಡಬಹುದೆ? ನಮ್ಮ ಹಿತಾಹಿತಗಳ ನಿರ್ಧಾರ ನಮ್ಮ ಕೈಯಲ್ಲಿಯೇ ಇದೆ – ಎನ್ನುವುದಕ್ಕೆ ಏನಾದರೂ ಪುರಾವೆಗಳಿವೆಯೆ?

ಸೌದೆಗೆ ಎಂದು ಕಾಡಿಗೆ ಹೋಗಿದ್ದ ಆ ಮುದುಕ. ಮುದುಕ ಎಂದ ಮೇಲೆ ಶಕ್ತಿ ತುಸು ಕಡಿಮೆ ಇರುವುದು ಸಹಜವೇ ಅಲ್ಲವೆ? ಅಸಹಾಯಕತೆ ಅವನಲ್ಲಿ ಕಾಣಿಸಿಕೊಂಡಿತು. ಅಸಹಾಯಕತೆ ಎದುರಾದಾಗ ಮನಸ್ಸು ತೀವ್ರವಾಗಿ ಪ್ರತಿಕ್ರಿಯಿಸುತ್ತದೆ. ಆ ಮುದುಕನೂ ಹಾಗೆ ಪ್ರತಿಕ್ರಿಯಿಸಿದ. 'ಸಾವಾದರೂ ಬರಬಾರದೆ?' ನಾವೆಲ್ಲರೂ ಅಸಹಾಯಕರಾಗಿ ಈ ಮಾತನ್ನು ಉದ್ಗರಿಸುತ್ತಿರುತ್ತೇವೆ. ಮುದುಕನ ಉದ್ಗಾರಕ್ಕೆ ಸಾವೂ ಸ್ಪಂದಿಸಿತು. ಅದು ಮೂರ್ತರೂಪದಲ್ಲಿ ಕಾಣಿಸಿಕೊಂಡಿತು! ಮುದುಕನಿಗೆ ಈಗ ಗೊಂದಲ ಆರಂಭವಾಯಿತು. ಅವನು ಸಾವನ್ನು ಆಹ್ವಾನಿಸಿದ್ದು ಸಾವನ್ನು ಬಯಸಿ ಅಲ್ಲ. ಸಾವು ಎಲ್ಲದಕ್ಕೂ ಪರಿಹಾರ – ಎಂಬ ನಿಲುವು ನಮ್ಮ ಹತಾಶೆಯ ಹಂತಕ್ಕೆ ಸೂಚನೆ. ಆದರೆ ಜೀವನದ ಆಸೆಯನ್ನು ತೊರೆಯಲು ಯಾರಿಗೂ ಮನಸ್ಸಿರದಷ್ಟೆ. ಇಂಥ ಆಸೆಯಿಂದ ಆ ಮುದುಕನೂ ಹೊರತಾಗಿರಲಿಲ್ಲ. ನಮ್ಮ ಅಸಹಾಯಕತೆಯ ಸಂಕಟವನ್ನು ತಪ್ಪಿಸಿಕೊಳ್ಳಲು ಅಥವಾ ಅದರಿಂದ ಮಾನಸಿಕ ಬಿಡುಗಡೆಯನ್ನು ಪಡೆಯಲು ಅಥವಾ ನಮ್ಮ ಬಗ್ಗೆ ನಾವೇ ಕರುಣೆಯನ್ನು ತಂದುಕೊಳ್ಳಲು ಆಗಾಗ ನಾವು 'ಸಾವ'ನ್ನು ಕರೆಯುತ್ತಿರುತ್ತೇವೆಯೆನ್ನಿ! ಸಾವನ್ನು ಮುದುಕ ಕರೆಯಲು ಕಾರಣವೇನು – ಎನ್ನುವುದು ಅವನ ಅನಂತರದ ಮಾತಿನಿಂದ ಗೊತ್ತಾಗಿಬಿಡುತ್ತದೆ. ಸೌದೆಯ ಹೊರೆಯನ್ನು ಎತ್ತಲು ಅವನಿಂದ ಆಗುತ್ತಿರಲಿಲ್ಲ. ಸಹಾಯ ಮಾಡಲೂ ಯಾರಿಲ್ಲ. ಹೀಗೆಂದು ಸೌದೆಯ ಹೊರೆಯನ್ನು ಅಲ್ಲೇ ಬಿಟ್ಟು ಹೋಗುವಂತೆಯೇ ಇಲ್ಲ. ಯಾರೂ ದಿಕ್ಕಿಲ್ಲದ ಸಂದರ್ಭದಲ್ಲಿ ಮನಸ್ಸು ಉದ್ವೇಗಕ್ಕೆ ಒಳಗಾಗುತ್ತದೆ. ಬದುಕಿನ ಸೋಲಿನ ಸಮಯದಲ್ಲಿ, ಇನ್ನು ಏನು ಮಾಡಲಾಗದು, ಸೋಲನ್ನು ಒಪ್ಪಿಕೊಳ್ಳಲೇಬೇಕು – ಎನ್ನುವ ಹಂತದಲ್ಲಿ ಸಾವನ್ನು ಕರೆಯುತ್ತೇವೆ. ಇದರ ಅರ್ಥ – ನಮಗೆ ಸಾವು ಬೇಕು ಎಂದಲ್ಲ. ನಾವು ಸೋಲಿನಿಂದ ತಪ್ಪಿಸಿಕೊಳ್ಳಬೇಕು; ಜೀವನದಲ್ಲಿ ಸೋಲನ್ನು ಒಪ್ಪಿಕೊಳ್ಳಲು ಮನಸ್ಸು ಸಿದ್ಧವಾಗಿರದು. ಎಲ್ಲ ಸೋಲುಗಳಿಗೂ ಕೊನೆ ಹಾಡಲು ಸಾವನ್ನು ಆಹ್ವಾನಿಸುತ್ತದೆ – ಮನಸ್ಸು. ಆದರೆ ಸಾವು ಎದುರಿಗೆ ಬಂದು ನಿಂತಾಗ ಜೀವನದ ಬೆಲೆ ಗೊತ್ತಾಗುತ್ತದೆ. ಆ ಮುದುಕನಿಗೆ ಆದ ಅನುಭವ ಅಂಥದ್ದು.

ನಮಗೆಲ್ಲರಿಗೂ ಒಂದು ಕುತೂಹಲ ಸಹಜ. ನಾವು ಹಳ್ಳಿಯಲ್ಲಿ ಹುಟ್ಟಿ ಬೆಳೆದಿದ್ದರೆ ಪಟ್ಟಣವನ್ನು ನೋಡುವ ಆಸೆ; ಪಟ್ಟಣದಲ್ಲಿದ್ದರೆ ನಗರಕ್ಕೆ ಹೋಗುವ ಹಂಬಲ; ನಗರವನ್ನು ಸುತ್ತಿದ್ದರೆ ನಾಡನ್ನು ಸಂಚರಿಸುವ ಬಯಕೆ; ಒಂದು ದೇಶವನ್ನು ನೋಡಿದ ಬಳಿಕ ಮತ್ತೊಂದು ದೇಶವನ್ನು ಸಂದರ್ಶಿಸುವ ತವಕ. ಆ ಊರು ಹೇಗಿದೆ? ಈ ಊರು ಹೇಗಿದೆ? ಆ ದೇಶ ಹೇಗಿದೆ? ಈ ದೇಶ ಹೇಗಿದೆ? – ಇಂಥ ಕುತೂಹಲ ನಮ್ಮೆಲ್ಲರಿಗೂ ಸಹಜ. ಆದರೆ ನಮಗೆ